ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-03

ಸಂಖ್ಯೆ : ಎಸ್1/ವಾ.ಪ/ಬ್ಯಾ.ಬದ:ಕು:54/2020-21 ದಿನಾಂಕ : 03.04.2021

## -: ಜ್ಞಾಪನ :-

**ವಿಷಯ : ಏಪ್ರಿಲ್ / ಮೇ 2021 ರ ಮಾಹೆಯ ವಾಣಿಜ್ಯ ಪರೀಕ್ಷೆಯ ಬೆರಳಚ್ಚು ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳು ತಂಡ ಬದಲಾವಣೆ ಮಾಡಿಕೊಳ್ಳುವ ಬಗ್ಗೆ.**

**ಉಲ್ಲೇಖ : ಈ ಕಛೇರಿಯ ಅಧಿಸೂಚನೆ ಸಂಖ್ಯೆ : ಎಸ್1/ವಾ.ಪ/ಏಪ್ರಿಲ್21/38/2020-21, ದಿನಾಂಕ : 22.02.2021.**

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಏಪ್ರಿಲ್ / ಮೇ 2021 ರ ಮಾಹೆಗಳಲ್ಲಿ ವಾಣಿಜ್ಯ ಪರೀಕ್ಷೆಗಳನ್ನು ದಿನಾಂಕ : 19.04.2021 ರಿಂದ 06.05.2021 ರವರೆಗೆ ನಡೆಸಲು ನಿರ್ಧರಿಸಲಾಗಿರುತ್ತದೆ. ಸದರಿ ದಿನಾಂಕಗಳಂದು ವಿವಿಧ ವಿಶ್ವವಿದ್ಯಾನಿಲಯಗಳ ಪದವಿ / ಸ್ನಾತಕೋತ್ತರ ಪದವಿ ಪರೀಕ್ಷೆಗಳು ನಿಗಧಿಯಾಗಿರುವುದಾಗಿ ಕೆಲವು ಅಭ್ಯರ್ಥಿಗಳು ಹಾಗೂ ವಾಣಿಜ್ಯ ಸಂಸ್ಥೆಯ ಮುಖ್ಯಸ್ಥರುಗಳಿಂದ ದೂರವಾಣಿ ಕರೆಗಳು ಬಂದ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಕ್ರಮ ವಹಿಸುವುದು :

1) **ಬೆರಳಚ್ಚು ಪರೀಕ್ಷೆ :**
ಬೆರಳಚ್ಚು ವಾಣಿಜ್ಯ ಪರೀಕ್ಷೆ ತೆಗೆದುಕೊಂಡಿರುವ ಅಭ್ಯರ್ಥಿಗಳಲ್ಲಿ ಪದವಿ / ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಅಭ್ಯರ್ಥಿಗಳಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮಾಹಿತಿಗಳನ್ನು ಪಡೆದು ಸದರಿ ಅಭ್ಯರ್ಥಿಗಳನ್ನು ವಾಣಿಜ್ಯ ಪರೀಕ್ಷೆ ನಿಗಧಿಯಾಗಿರುವ ದಿನಾಂಕಗಳಂದು ಅಂದರೆ, ದಿನಾಂಕ:19.04.2021 ರಿಂದ 21.04.2021 ರ ದಿನಾಂಕಗಳಲ್ಲಿ ಅಭ್ಯರ್ಥಿಗಳಿಗೆ ಅನುಕೂಲವಾಗುವ ದಿನಾಂಕಗಳಲ್ಲಿ ತಂಡಗಳನ್ನು ರಚಿಸಿ ಪರೀಕ್ಷೆ ನಡೆಸಬೇಕಾಗಿರುತ್ತದೆ. ಅಂತಹ ಅಭ್ಯರ್ಥಿಗಳ ಮಾಹಿತಿಗಳನ್ನು ಕೆಳಕಂಡ ನಮೂನೆಯಲ್ಲಿ ಭರ್ತಿ ಮಾಡಿ adpisvsection@gmail.com ವಿಳಾಸಕ್ಕೆ ಸಲ್ಲಿಸುವುದು ಹಾಗೂ ಹಾರ್ಡ್‌ಪ್ರತಿಯನ್ನು ಸಹಾಯಕ ನಿರ್ದೇಶಕರು (ಇತರೆ ಪರೀಕ್ಷೆಗಳ ವಿಭಾಗ) ವಾಣಿಜ್ಯ ಶಾಖೆ, 4ನೇ ಮಹಡಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ಈ ವಿಳಾಸಕ್ಕೆ ತ್ವರಿತವಾಗಿ ಅಂಚೆ ಮೂಲಕ ಕಳುಹಿಸುವುದು.

| ಕ್ರ ಸಂ | ಅಭ್ಯರ್ಥಿಯ ಹೆಸರು | ವಾಣಿಜ್ಯ ಪರೀಕ್ಷೆಯ ಅರ್ಜಿ ಸಂಖ್ಯೆ **(Application No)** | ಪದವಿ/ ಸ್ನಾತಕೋತ್ತರ ಪದವಿ ಪರೀಕ್ಷೆ ಇರುವ ದಿನಾಂಕ | ಪದವಿ/ ಸ್ನಾತಕೋತ್ತರ ಪದವಿ ಪರೀಕ್ಷೆಯ ವಿಷಯ | ಪದವಿ/ ಸ್ನಾತಕೋತ್ತರ ಪದವಿ ಪರೀಕ್ಷೆಯ ನೋಂದಣಿ ಸಂಖ್ಯೆ | ವಾಣಿಜ್ಯ ಪರೀಕ್ಷೆಗೆ ಹಾಜರಾಗಲು ಕೋರುವ ದಿನಾಂಕ |
|---|---|---|---|---|---|---|
| | | | | | | |

2) **ಶೀಘ್ರಲಿಪಿ ಹಾಗೂ ಇತರೆ ವಾಣಿಜ್ಯ ಪರೀಕ್ಷೆ :**
ಶೀಘ್ರಲಿಪಿ ಹಾಗೂ ಇತರೆ ವಾಣಿಜ್ಯ ಪರೀಕ್ಷೆಗಳನ್ನು ಒಂದೇ ತಂಡದಲ್ಲಿ ನಡೆಸುವುದರಿಂದ ಸದರಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ತಂಡ ಬದಲಾವಣೆಗೆ ಅವಕಾಶವಿರುವುದಿಲ್ಲ.

ಅಭ್ಯರ್ಥಿಗಳು ಪದವಿ / ಸ್ನಾತಕೋತ್ತರ ಪದವಿಯ ಪ್ರವೇಶಪತ್ರ (Admission Ticket) ಯನ್ನು ಕಡ್ಡಾಯವಾಗಿ ವಾಣಿಜ್ಯ ಸಂಸ್ಥೆಯ ಮುಖ್ಯಸ್ಥರ ಮೇಲು ಸಹಿಯೊಂದಿಗೆ Scan ಮಾಡಿ ಮೇಲ್ಕಂಡ ನಮೂನೆಯೊಂದಿಗೆ ದಿನಾಂಕ : 05.04.2021 ರೊಳಗಾಗಿ adpisvsection@gmail.com ವಿಳಾಸ Mail ಮಾಡುವುದು.

**ಸೂಚನೆ: ದಿನಾಂಕ : 05.04.2021 ರ ನಂತರ ಬರುವ ಯಾವುದೇ ಪ್ರಸ್ತಾವನೆಗಳನ್ನು ಮಾನ್ಯ ಮಾಡಲಾಗುವುದಿಲ್ಲ.**

3/4/2021

ನಿರ್ದೇಶಕರು
(ಇತರೆ ಪರೀಕ್ಷೆಗಳು)